## ನೀಲಿ ಕುರಿಂಜಿ ಹೂವು

ಈಚೆಗೆ ಅಂದರೆ ಸೆಪ್ಟೆಂಬರ್ 4ರಂದು ಚಿಕ್ಕಮಗಳೂರು ಜಿಲ್ಲೆಯ ಚಂದ್ರ ದ್ರೋಣ ಪರ್ವತ ಶ್ರೇಣಿಗೆ ಪ್ರವಾಸಕ್ಕೆಂದು ಹೋದಾಗ ಅಪರೂಪದ ನೀಲಿ ಕುರಿಂಜಿ ಹೂಗಳ ದರ್ಶನವಾಯಿತು. ಈ ಪರ್ವತ ಶ್ರೇಣಿಗಳಲ್ಲಿ ಎಲ್ಲಿ ನೋಡಿದರೂ ನೀಲಿ ಕುರಿಂಜಿ ಹೂಗಳದ್ದೇ ದರ್ಬಾರ್! ಈ ನೀಲಿ ಕುರಿಂಜಿ ಹೂಗಳ ಬಗ್ಗೆ ಹಲವು ಜನ ಹಲವು ಬಗೆಯ ವಿವರಣೆಯನ್ನು ಈಗಾಗಲೇ ನೀಡಿದ್ದಾರೆ. ಆದರೆ ಸೀತಾಳಯ್ಯನಗಿರಿ ಮಠದ ರುದ್ರೇಶ ಸ್ವಾಮಿಗಳ ಪ್ರಕಾರ ಸುಮಾರು 13–18 ವರ್ಷಗಳ ಹಿಂದೆ ಈ ಪ್ರದೇಶದಲ್ಲಿ ನೀಲಿ ಕುರಿಂಜಿ ಹೂವುಗಳು ಅರಳಿದ್ದವು. ಅದಾದ ಬಳಿಕ ಈ ವರ್ಷ ಅರಳಿವೆ. ಮಳೆ ಕಡಿಮೆಯಿದ್ದರೆ ಸುಮಾರು ಒಂದು ತಿಂಗಳವರೆಗೆ ಹೂವುಗಳು ಅರಳಿರುತ್ತವೆ. ಮಳೆ ಹೆಚ್ಚಾದರೆ ಹೂವುಗಳು ಕೊಳೆತು ಹೋಗುತ್ತವೆ. ಇಲ್ಲಿನ ನೀಲಿ ಕುರಿಂಜಿ ಉತ್ತರಾಖಂಡದ 'ವ್ಯಾಲಿ ಆಫ್ ಫ್ಲವರ್'ನಲ್ಲಿ ಕಂಡ ಹೂವುಗಳನ್ನು ಮೀರಿಸುವಂತಿವೆ.

–ಪಿ.ಹೆಚ್. ಪಾಟೀಲ್, ರಾಣೆಬೆನ್ನೂರ



## ಡಾಲ್ಫಿನ್ ಕುಟುಂಬ!

'ನಮ್ಮನ್ನು ಉಳಿಸಿ' ಎನ್ನುವಂತೆ ನೋಡುತ್ತಿರುವ, ಕಟ್ಟಿಗೆ ತುಂಡುಗಳಿಂದ ಮಾಡಿರುವ ಡಾಲ್ಫಿನ್‌ಗಳ ಈ ಪ್ರತಿಕೃತಿಯು ಗೋವಾದ ಹೋಟೆಲೊಂದರ ಅಂಗಳದಲ್ಲಿ ಆಕರ್ಷಿಸಿತು. ನೀಲಿ ಆಕಾಶ ಮತ್ತು ಹಸಿರು ಹಿನ್ನೆಲೆಯಲ್ಲಿ ಇದು ಮನಕ್ಕೆ ಮುದ ನೀಡಿತು. ನೀಲಿ ಸಾಗರದಲ್ಲಿ ನೀರಾಟವಾಡುವ ಡಾಲ್ಫಿನ್‌ಗಳೇ ಎದ್ದು ಬಂದಂತೆ ಇದು ಕಾಣುತ್ತದೆ. ಕಣ್ಮರೆಯಾಗುತ್ತಿರುವ ಅಪರೂಪದ ಸಸ್ತನಿ ಡಾಲ್ಫಿನ್ ಕುರಿತು ಪ್ರವಾಸಿಗರಿಗೆ ಅರಿವು ಮೂಡಿಸುವ ಸುಂದರ ಪ್ರಕೃತಿ ಕಾವ್ಯದಂತಿರುವ ಈ ಕಾಷ್ಠಶಿಲ್ಪವು ನೀರಿನಿಂದ ಹೊರಬಿದ್ದ ಮೀನಾದರೂ ನಿರಾಭರಣ ಸುಂದರಿಯಾಗಿ ಕಂಗೊಳಿಸುತ್ತದೆ. ಪರಿಸರ ಪ್ರೇಮ ಮೆರೆಯುವ ಹೋಟೆಲಿನ ಈ ನಡೆ ಮೆಚ್ಚುಗೆಯಾಗುತ್ತದೆ.



–ವಾ. ಮುರಳೀಧರ, ತೀರ್ಥಹಳ್ಳಿ

## ಕರಟದಲ್ಲಿ ಕಂಡ ಕಲೆ!

ಸೋಮಾರಿಗಳಿಗೆ, ಕೈಯಲ್ಲಿ ಆಗದವನಿಗೆ, ಪೆದ್ದನಿಗೆ ಬೈಯ್ಯುವಾಗ ಕರಾವಳಿ ಪ್ರದೇಶದಲ್ಲಿ 'ಗೇಯ್ಪಿ ತಾಕ್ಕಂಡೆ ಬೇಡುಕೋಗ' ಎಂಬ ಮಾತೊಂದಿದೆ. ಕೆಲವು ಸಂಪ್ರದಾಯಸ್ಥರ ಮನೆಯ ಮುಂದೆ ತೆಂಗಿನಕಾಯಿಯ ಗೆರಟೆ (ಕರಟ) ಕಂಡರೆ ಅಪಶಕುನ ಎಂಬ ನಂಬಿಕೆ ಇದೆ. ಒಂದು ಕಾಲದಲ್ಲಿ ಶೂದ್ರರಿಗೆ ಗೆರಟೆಯಲ್ಲಿಯೇ ಚಹ, ತಿಂಡಿ ಕೊಡುವ ಅನಿಷ್ಟ ಪದ್ಧತಿ ಕೂಡ ಇತ್ತು. ಇಂದು ಸಾಮಾನ್ಯವಾಗಿ ಗೆರಟೆಗಳನ್ನು ಬಚ್ಚಲು ಮನೆಯ ಒಲೆಗೆ ಉರುವಲಾಗಿ ಬಳಸುವುದನ್ನು ಕಾಣಬಹುದು!

ಆದರೆ, ಅದೇ ಗೆರಟೆ ಕಲಾವಿದನ ಕೈಗೆ ಸಿಕ್ಕರೆ ಅದು ಕಲೆಯಾಗಿ ಅರಳುತ್ತದೆ. ಅದೇ ಕರಟ ಅತ್ಯಾಕರ್ಷಕ ಲಾಟೀನು, ಕಪ್ಪು–ಬಸಿ, ಬಡಿಸುವ ಸೌಟು, ಹಡಗು, ಪಾತ್ರೆ ಪಗಡೆ, ಹೂ ಕುಂಡ, ಗಿಡ, ಗಿಡ ಸುತ್ತಿದ ಬಳ್ಳಿ, ದೀಪ, ಮಕ್ಕಳ ಆಟಿಕೆ ಸಾಮಾನು ಎಲ್ಲವೂ ಆಗಬಹುದೆಂಬುದನ್ನು ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಮಾದನಗೇರಿಯ ಅಪ್ಪಟ ಕಲಾವಿದ ಅಂತೋನಿ ಇಲಿಯಾಸ ಲೋಬೊ ತೋರಿಸಿ ಕೊಟ್ಟಿದ್ದಾರೆ. ಮೂಲತಃ ಹೊನ್ನಾವರದ ಗೇರುಸೊಪ್ಪಾದವರಾದ ಲೋಬೊ ಅವರು ಮಾದನಗೇರಿಯ ಮಗಳನ್ನು ಮದುವೆಯಾದ ನಂತರ ಮಾದನಗೇರಿಯನ್ನೇ ತಮ್ಮ ಕರ್ಮಭೂಮಿಯಾಗಿಸಿಕೊಂಡಿದ್ದಾರೆ. 'ಈ ಕಲೆಗೆ ಗೆರಟೆಯ ಆಯ್ಕೆ ಮುಖ್ಯ. ನಂತರ ಸೂಕ್ಷ್ಮತೆ ಹಾಗೂ ತಾಳ್ಮೆ ಬೇಕು' ಎನ್ನುತ್ತಾರೆ ಅವರು.

ಅರವತ್ತೊಂದು ವಸಂತಗಳನ್ನು ಅರ್ಥಪೂರ್ಣವಾಗಿ ಕಳೆದ ಲೋಬೊ ಗಾರೆ ಕೆಲಸ, ಪಂಕ್ಚರ್ ತೆಗೆಯುವ ಕಾಯಕ, ಕೆತ್ತನೆ ಕೆಲಸದಲ್ಲೂ ನಿಪುಣರು. ಇವರ ಕರಟ ಕಲೆಗೆ ಅವರ ಧರ್ಮಪತ್ನಿ ವೆರೋಣಿಕಾ ಸಹ ಬೆನ್ನೆಲುಬಾಗಿ ನಿಂತಿದ್ದಾರೆ.

–ಬೀರಣ್ಣ ನಾಯಕ ಮೊಗಟಾ



**ನೀವೂ ಬರೆಯಿರಿ**

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ. **ವಿಳಾಸ:** editorsu@sudha.co.in